ದಿನಾಂಕ 10/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ.ಈ.ಎಸ್ ವಕೀಲರಿಂದ

ನನ್ನ ತಾತ ಈಶ್ವರಪ್ಪ ಈಗ ಮೃತಪಟ್ಟಿರುತ್ತಾರೆ. ನನ್ನ ಅಜ್ಜಿಯೂ ಮೃತಪಟ್ಟಿರುತ್ತಾರೆ. ನನ್ನ ತಾತ ಈಶ್ವರಪ್ಪನಿಗೆ 3 ಮಂದಿ ಅಣ್ಣತಮ್ಮಂದಿರು, 3 ಮಂದಿ ಅಕ್ಕತಂಗಿಯರು. ಈಶ್ವರಪ್ಪನ ಅಕ್ಕತಂಗಿಯರು ಜೀವಂತ ಇದ್ದಾರೆ. ಸದರಿ ಅಕ್ಕತಂಗಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲವೆಂದರೆ ಸರಿ. ನಾನು ಈ ದಾವೆಯನ್ನು ನನ್ನ ಪ್ರತ್ಯೇಕ ಭಾಗಕ್ಕಾಗಿ ಹಾಕಿರುತ್ತೇನೆ. ನನ್ನ ತಂದೆಗೆ ನಾನು ಭಾಗ ಕೇಳಿದಾಗ ಜಮೀನನ್ನು ಭೋಗ್ಯದಿಂದ ಬಿಡಿಸಿಕೊಳ್ಳಬೇಕೆಂದು ಹೇಳಿರುತ್ತಾರೆ. ಸದರಿ ಜಮೀನಿನ ಸರ್ವೆ ನಂ. 53/3 ಆಗಿರುತ್ತದೆ. ಭೋಗ್ಯದ ಬಗ್ಗೆ ವಿಚಾರಣೆ ಮಾಡಲು ಹೋದಾಗ ಪಹಣಿಗಳಲ್ಲಿ 3 ನೇ ಪ್ರತಿವಾದಿಯ ಹೆಸರು ಬರುತ್ತಿದ್ದು ನಾನು ಆತನನ್ನು ಭೋಗ್ಯದ ದಾಖಲೆಗಳನ್ನು ಕೇಳಲು ಆತ ಯಾವುದೇ ದಾಖಲೆ ನೀಡಿರುವುದಿಲ್ಲ. ಆದಕಾರಣ ಈ ದಾವೆ ಸಲ್ಲಿಸಿದ್ದೇನೆ.

2. ನನ ವಾದಪತ್ರದಲ್ಲಿ ನಮೂದಾಗಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ ನನ್ನ ವಾದಪತ್ರದಲ್ಲಿ ಮೋಸದಿಂದ ಭೋಗ್ಯದ ಪತ್ರ ಮಾಡಿಸಿಕೊಂಡಿದ್ದಾರೆ ಎಂದು ನಾನು ಬರೆಸಿಲ್ಲ. ಈಶ್ವರಪ್ಪನಿಗೆ ಇಬ್ಬರು ಮಕ್ಕಳು. ಅವರೆಂದರೆ ನನ್ನ ತಂದೆ ಹಾಗೂ ಶಿವಕುಮಾರಿ ಆಗಿರುತ್ತಾರೆ. ಶಿವಕುಮಾರಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿಯವರು ಬದುಕಿಯೇ ಇದ್ದಾರೆ. ಈ ದಾವೆ ಸರ್ವೆ ನಂ. 53/3 ಅಷ್ಟಕ್ಕೆ ಸಲ್ಲಿಸಿದ್ದೇನೆ. ಸರ್ವೆ ನಂ. 53/3 ನ್ನು ಹೊರತುಪಡಿಸಿ ನನ್ನ ತಾತನಿಗೆ ಇನ್ನೂ 1 ಸರ್ವೆ ನಂಬರುಗಳು ಇರುತ್ತವೆ. ನನ್ನ ತಂದೆಯ ಹೆಸರಿನಲ್ಲಿ 4 ಸರ್ವೆ ನಂಬರುಗಳು ಇರುತ್ತವೆ. ನನ್ನ ತಂದೆಗೆ ಇನ್ನೂ 5 ಸರ್ವೆ ನಂಬರುಗಳ ಜಮೀನುಗಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿರುವ ಸರ್ವೆ ನಂಬರ್ ಗಳು ನನ್ನ ತಾತ ಮೃತಪಟ್ಟ ನಂತರ ಪೌತಿಯಾಧಾರದ ಮೇರೆಗೆ ಬಂದಿದ್ದಂತಹವುಗಳು ಆಗಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

3. ಸರ್ವೆ ನಂ. 53/3 ಮೂಲತಃ ನನ್ನ ಅಜ್ಜಿಗೆ ಸೇರಿದ ಆಸ್ತಿ ಆಗಿರುತ್ತದೆ. ನನ್ನ ಅಜ್ಜಿಗೆ ಪಿತ್ರಾರ್ಜಿತವಾಗಿ ಬಂದಿದ್ದಂತಹ ಆಸ್ತಿ ಆಗಿರುತ್ತದೆ. ಸದರಿ ಸರ್ವೆ ನಂಬರಿಗೆ ಸಂಬಂಧಪಟ್ಟ ದಾಖಲೆಗಳನ್ನು

ನೋಡಿ ತಿಳಿದುಕೊಂಡಿದ್ದೇನೆ. ಸದರಿ ಸರ್ವೆ ನಂ. 53/3 2013 ರಲ್ಲಿ 3 ನೇ ಪ್ರತಿವಾದಿಗೆ ಕ್ರಯ ಆಗಿರುತ್ತದೆ. ಆ ದಿನದಿಂದಲೂ 3 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು 3 ನೇ ಪ್ರತಿವಾದಿಗೆ ಯಾರು ಯಾರು ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕಾಗಿ ಸದರಿ ಕ್ರಯ ಆಗಿದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ಅದು ಕ್ರಯ ಆಗಿಲ್ಲ ಎಂದು

<u>ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.</u>

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**